# ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

ದೂರವಾಣಿ ಸಂ:-08533-274414
ಫ್ಯಾಕ್ಸ್ ನಂ:
CIN: U4010KA2002SGC030436
E-mail : aeekaratagi@gmail.com
E-mail : sagescom12 gmail.com
Website: www.gescom.in

ನೊಂದಣಿ ಕಛೇರಿ,
ಗು.ವಿ.ಸ.ಕಂ.ನಿ., ಮುಖ್ಯ ರಸ್ತೆ,
ಕಲಬುರಗಿ 585102.
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನೆ ಉಪ-ವಿಭಾಗ
ಗು.ವಿ.ಸ.ಕಂ.ನಿ., ಕಾರಟಗಿ.

ಸಂಖ್ಯೆ: ಸಕಾನಿಅ(ವಿ)/ಸಲೆಅ/ಕಾ/ಹಿಸ/2021-22/2760-2764 ದಿನಾಂಕ: 16-12-2021

ಗೆ,
ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾರ್ಯ ಮತ್ತು ಪಾಲನಾ ವಿಭಾಗ,
ಗು.ವಿ.ಸ.ಕಂ.ನಿ., ಗಂಗಾವತಿ.

ಮಾನ್ಯರೇ,

ವಿಷಯ: ದಿ:15-12-2021 ರಂದು ಕಾರ್ಯ ಮತ್ತು ಪಾಲನಾ ಉಪ ವಿಭಾಗ ಗು.ವಿ.ಸ.ಕಂ.ನಿ ಕಾರಟಗಿಯಲ್ಲಿ ಜರುಗಿದ **ಗ್ರಾಹಕರ ಕುಂದುಕೊರತೆ ಸಭೆಯಲ್ಲಿ** ಚರ್ಚಿಸಿದ ವಿಷಯಗಳು ಹಾಗೂ ಕೈಗೊಂಡ ಕ್ರಮಗಳು.

ದಿ:15-12-2021 ರಂದು ಮದ್ಯಾನ್ಹ 03:00 ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ,ಕಾರ್ಯ ಮತ್ತು ಪಾಲನಾ ಉಪ-ವಿಭಾಗ ಗು.ವಿ.ಸ.ಕಂ.ನಿ, ಕಾರಟಗಿಯವರ ಅಧ್ಯಕ್ಷತೆಯಲ್ಲಿ ಗ್ರಾಹಕರೊಂದಿಗಿನ ಕುಂದುಕೊರತೆಗಳ ಸಭೆ ನಡೆಸಲಾಯಿತು. ಸಭೆಗೆ ನಗರದ ಹಾಗೂ ಹಳ್ಳಿಗಳಿಂದ ಗ್ರಾಹಕರು ಸಭೆಗೆ ಆಗಮಿಸಿದ್ದು ಹಾಗೂ ಪತ್ರಕರ್ತರು ಸಭೆಗೆ ಹಾಜರಾಗಿದ್ದರು. ಸಭೆಯಲ್ಲಿ ಚರ್ಚಿಸಿದ ವಿಷಯಗಳು ಹಾಗೂ ಗ್ರಾಹಕರ ಕುಂದುಕೊರತೆಗಳಿಗೆ ಕೈಗೊಂಡ ಕ್ರಮಗಳು ಈ ಕೆಳಗಿನಂತಿರುತ್ತವೆ.

1) ಶ್ರೀ ಮಂಜುನಾಥ ಸಾ:ಕಾರಟಗಿ ರವರು ಎನ್.ಎನ್.ಆರ್ ಕಾಂಪ್ಲೆಕ್ಸ ನಲ್ಲಿ ಹೆಚ್ಚಿನ ವೋಲ್ಟೇಜ ರಾತ್ರಿಯಿಂದ ಬೆಳಗ್ಗೆ ವರಗೆ ಇರುತ್ತದೆ ಇದರಿಂದಾಗಿ ವಿದ್ಯುತ್ ಉಪಕರಣಗಳಿಗೆ ಸುಡುವ ಹಾಗೂ ಹೆಚ್ಚಿನ ಬಿಲ್ಲು ದಾಖಲಾಗುವ ಸಂಭವ ವಿರುವುದರಿಂದ ಇದನ್ನು ಸರಿಪಡಿಸಿ ಎಂದು ಕೇಳಿಕೊಂಡರು.
   ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಸದರಿ ವಿಷಯದ ಕುರಿತು ಸೂಕ್ತ ಕ್ರಮಕೈಗೊಳ್ಳಲು ಶಾಖಾಧಿಕಾರಿಗಳು ಕಾರಟಗಿಯವರಿಗೆ ಸೂಚಿಸಿದರು.
   (ಕ್ರಮ: ಶಾಖಾಧಿಕಾರಿ ಕಾರಟಗಿ)
2) ಶ್ರೀ ದುರ್ಗಪ್ಪ ತಂದೆ ಹುಲಗಪ್ಪ ಸಾ:ಹೊಸ ಜೂರಟಗಿ ರವರು ಮಾತನಾಡಿ ವ್ಹಿಜಲನ್ಸ ಪ್ರಕರಣ ದಾಖಲಾಗಿದ್ದು, ಇದರಿಂದಾಗಿ ವಿಧಿಸಿದ ಹೆಚ್ಚುವರಿ ಹಣವನ್ನು ಕಡಿಮೆ ಮಾಡಲು ಕೋರಿದರು.
   ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಮಾತನಾಡಿ ಕಂಪನಿಯ ನಿಯಮಗಳಪ್ರಕಾರ ಕ್ರಮಕೈಗೊಳ್ಳಲು ಸಂಬಂಧಿಸಿದ ವಿಷಯ ನಿರ್ವಾಹಕರಿಗೆ ಸೂಚಿಸಿದರು.
   (ಕ್ರಮ: ಸಂಬಂಧಿಸಿದ ವಿಷಯ ನಿರ್ವಾಹಕರು)
3) ಶ್ರೀ ರಾಮಪ್ಪ ತಂದೆ ಕರಿಯಪ್ಪ ಸಾ:ಹೊಸ ಜೂರಟಗಿ ರವರು ಮಾತನಾಡಿ ವ್ಹಿಜಲನ್ಸ ಪ್ರಕರಣ ದಾಖಲಾಗಿದ್ದು, ಇದರಿಂದಾಗಿ ವಿಧಿಸಿದ ಹೆಚ್ಚುವರಿ ಹಣವನ್ನು ಕಡಿಮೆ ಮಾಡಲು ಕೋರಿದರು.
   ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಮಾತನಾಡಿ ಕಂಪನಿಯ ನಿಯಮಗಳಪ್ರಕಾರ ಕ್ರಮಕೈಗೊಳ್ಳಲು ಸಂಬಂಧಿಸಿದ ವಿಷಯ ನಿರ್ವಾಹಕರಿಗೆ ಸೂಚಿಸಿದರು.
   (ಕ್ರಮ: ಸಂಬಂಧಿಸಿದ ವಿಷಯ ನಿರ್ವಾಹಕರು)
4) ಶ್ರೀ ಬಸಪ್ಪ ವಿದ್ಯುತ್ ಗುತ್ತಿಗೆದಾರರು ಕಾರಟಗಿಯವರು ಮಾತನಾಡಿ ತಿಮ್ಮಾಪೂರ ಗ್ರಾಮದಲ್ಲಿನ ತಿಮ್ಮಪ್ಪ ಟಿ.ಸಿ ಯ ವಿದ್ಯುತ್ ತಂತಿಗಳು ಬಹಳ ಹಳೆಯದಾಗಿದ್ದು ಹೊಸದಾಗಿ ವಿದ್ಯುತ್ ವಾಯರ್ ಗಳನ್ನು ಅಳವಡಿಸಲು ಕೋರಿದರು.
   ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಮಾತನಾಡಿ ಈ ಕೆಲಸ ಮಂಜೂರಾಗಿದ್ದು ಒಂದುವಾರದೊಳಗಾಗಿ ಕೆಲಸ ಪೂರ್ಣಗೊಳಿಸುವುದಾಗಿ ತಿಳಿಸಿದರು
   (ಕ್ರಮ: ಶಾಖಾಧಿಕಾರಿ ಬೂದಗುಂಪ)

5) ನಾಗನಕಲ್ ಗ್ರಾಮದಲ್ಲಿ 63 ಕೆ.ವ್ಹಿ.ಯ ಸಾಮರ್ಥ್ಯವುಳ್ಳ ಒಂದು ಹೆಚ್ಚುವರಿ ಟಿ.ಸಿಯನ್ನು ಅಳವಡಿಸಲು ಗ್ರಾಹಕರು ಕೋರಿದರು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಮಾತನಾಡಿ ಶಾಖಾಧಿಕಾರಿ ಕಾರಟಗಿಯವರಿಗೆ ಕಂಪನಿಯನಿಯಾಮನುಸಾರ ಕ್ರಮಕೈಗೊಳ್ಳಲು ಸೂಚಿಸಿದರು.

(ಕ್ರಮ: ಶಾಖಾಧಿಕಾರಿ ಕಾರಟಗಿ)

6) ಯರಡೋಣ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿನ ಸಿದ್ದಾಪೂರ ಗ್ರಾಮದಲ್ಲಿನ ಟಿ.ಸಿಯ ವಾಹಕ ಬದಲಾವಣೆಯ ನಿರ್ವಹಣೆ ಕೆಲಸವನ್ನು ಮಾಡಲು ಗ್ರಾಮದ ಗ್ರಾಹಕರು ತಿಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಮಾತನಾಡಿ ಶಾಖಾಧಿಕಾರಿ ಕಾರಟಗಿಯವರಿಗೆ ಕಂಪನಿಯ ನಿಯಾಮನುಸಾರ ಕ್ರಮಕೈಗೊಳ್ಳಲು ಸೂಚಿಸಿದರು.





ಕಾರಟಗಿ ನಗರದಲ್ಲಿ ಸುಮಾರು ಕಂಬಗಳು ಶೀಥಿಲಗೊಂಡಿದ್ದು ಮತ್ತು ಹಳೆಯ ವಾಯರ್ ಇರುವುದರಿಂದಾಗಿ ತುಂಡರಸಿ ಬೀಳುವ ಹಂತದಲ್ಲಿರುವದರಿಂದ ಹೊಸ ವಾಯರ್ ಗಳನ್ನು ಅಳವಡಿಸಲು ಶ್ರೀ ಮಂಜುನಾಥ ಗ್ರಾಹಕರು ಕಾರಟಗಿಯವರು ತಿಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಮಾತನಾಡಿ ಶಾಖಾಧಿಕಾರಿ ಕಾರಟಗಿಯವರಿಗೆ ಕಂಪನಿಯ ನಿಯಾಮನುಸಾರ ಕ್ರಮಕೈಗೊಳ್ಳಲು ಸೂಚಿಸಿದರು.

(ಕ್ರಮ: ಶಾಖಾಧಿಕಾರಿ ಕಾರಟಗಿ)

8) ಕಾರಟಗಿ ನಗರದಲ್ಲಿನ ಪೋಲಿಸ್ ಸ್ಟೇಶನ್ ಎದುರುಗಡೆಯ ರಸ್ತೆಯ ಮೇಲೆ ಹಾದುಹೋಗಿರುವ ವಿದ್ಯುತ್ ತಂತಿಗಳು ತುಂಬಾ ಹಳೆಯ ವಾಯರ್ ಇರುವುದರಿಂದಾಗಿ ತುಂಡರಸಿ ಬೀಳುವ ಹಂತದಲ್ಲಿರುವದರಿಂದ ಹೊಸ ವಾಯರ್ ಗಳನ್ನು ಅಳವಡಿಸಲು ಶ್ರೀ ಶಂಕರ ಗ್ರಾಹಕರು ಕಾರಟಗಿಯವರು ತಿಳಿಸಿದರು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಮಾತನಾಡಿ ಶಾಖಾಧಿಕಾರಿ ಕಾರಟಗಿಯವರಿಗೆ ಕಂಪನಿಯ ನಿಯಾಮನುಸಾರ ಕ್ರಮಕೈಗೊಳ್ಳಲು ಸೂಚಿಸಿದರು.

(ಕ್ರಮ: ಶಾಖಾಧಿಕಾರಿ ಕಾರಟಗಿ)

9) ವಿದ್ಯುತ್ ಸುರಕ್ಷತಾ ಸಪ್ತಾಹದ ಕುರಿತು ಶಾಖಾಧಿಕಾರಿಗಳು ಕಾರಟಗಿಯವರು ಮಾತನಾಡಿ ಸಭೆಯಲ್ಲಿ ಹಾಜರಿರುವ ಎಲ್ಲಾ ಗ್ರಾಹಕರಿಗೆ ಸುರಕ್ಷತೆಯ ಕುರಿತು ಸೂಕ್ತ ತಿಳುವಳಿಕೆ ನೀಡಿದರು.

10) ಹೊಸ ಜೂರಟಗಿ ಗ್ರಾಮದಲ್ಲಿ ವೆಂಕೋಬಣ್ಣ ಎಂಬ ಮನೆಯವರ ಹತ್ತಿರ ಒಂದು ವಿದ್ಯುತ್ ಕಂಬ ಅಳವಡಿಸಲು ಶ್ರೀ ದುರ್ಗಪ್ಪ ಹೊಸ ಜೂರಟಗಿ ಗ್ರಾಮದ ಗ್ರಾಹಕರು ಕೋರಿದರು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಮಾತನಾಡಿ ಶಾಖಾಧಿಕಾರಿ ಕಾರಟಗಿಯವರಿಗೆ ಕಂಪನಿಯ ನಿಯಾಮನುಸಾರ ಕ್ರಮಕೈಗೊಳ್ಳಲು ಸೂಚಿಸಿದರು.

(ಕ್ರಮ: ಶಾಖಾಧಿಕಾರಿ ಬೂದಗುಂಪ)

11) ಎಮ್.ಡಿ.ನಗರ ದಲ್ಲಿ 25 ಕೆ.ವ್ಹಿ.ಎ ಟಿ.ಸಿ.ಯನ್ನು ಹೆಚ್ಚುವರಿ 63 ಕೆ.ವ್ಹಿ.ಎ ಟಿ.ಸಿಯನ್ನಾಗಿ ಮಾಡಲು ಗ್ರಾಹಕರು ಕೋರಿದರು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ಮಾತನಾಡಿ ಶಾಖಾಧಿಕಾರಿ ಬೂದಗುಂಪರವರಿಗೆ ಕಂಪನಿಯ ನಿಯಾಮನುಸಾರ ಕ್ರಮಕೈಗೊಳ್ಳಲು ಸೂಚಿಸಿದರು.

ಈ ಸಭೆಯಲ್ಲಿ ಗ್ರಾಹಕರ ಕುಂದುಕೊರತೆಗಳ ಜೊತೆಗೆ ಇತ್ತಿಚಿನ ದಿನಗಳಲ್ಲಿ ಜರುಗಿದ ಹಾಗೂ ಜರುಗಬಹುದಾದ ವಿದ್ಯುತ್ ಅವಘಡಗಳ ಕುರಿತು ಸುರಕ್ಷಿತ ಕ್ರಮಗಳನ್ನು ಅನುಸರಿಸುವುದು ಹಾಗೂ ಅವಶ್ಯಕತೆಗೆ ತಕ್ಕಂತೆ ವಿದ್ಯುತ್ ಬಳಕೆಯ ಕುರಿತು ಗ್ರಾಹಕರೊಂದಿಗೆ ಚರ್ಚಿಸಿ ವಿಷಯಗಳನ್ನು ಪ್ರಸ್ತಾಪಿಸಲಾಯಿತು.

ಕುಂದುಕೊರತೆ ಸಭೆಗೆ ಹಾಜರಾದ ಎಲ್ಲಾ ಗ್ರಾಹಕರನ್ನು, ರೈತರನ್ನು, ಹಾಗೂ ಪತ್ರಿಕಾ ಮಿತ್ರರನ್ನು ಉದ್ದೇಶಿಸಿ ಸಹಾಯಕ ಕಾರ್ಯನಿವಾಹಕ ಅಭಿಯಂತರರು(ವಿ) ಉಪ-ವಿಭಾಗ ಕಾರಟಗಿರವರು ಮಾತನಾಡಿ ಸಭೆಯಲ್ಲಿ ಚರ್ಚಿಸಿದ ಎಲ್ಲಾ ಕುಂದುಕೊರತೆಗಳಿಗೆ ಶೀಘ್ರದಲ್ಲಿ ಕ್ರಮಕೈಗೊಳ್ಳುವುದಾಗಿ ಹಾಗೂ ಕಂಪನಿಯೊಂದಿಗೆ ಸಹಕರಿಸಲು ಕೋರಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಹಾಜರಿದ್ದ ವಿದ್ಯುತ್ ಗ್ರಾಹಕರುಗಳು**

1.ಶ್ರೀ ಮಂಜುನಾಥ 2.ಶಂಕರ 3.ದುರ್ಗಪ್ಪ 4. ವಿದ್ಯುತ್ ಗುತ್ತಿಗೆದಾರರು ಇನ್ನೂ ಮುಂತಾದವರು ಹಾಜರಿದ್ದರು.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

ಶ್ರೀ ಕೆ.ನಾಗರಾಜ ಸಹಾಯಕ ಕಾರ್ಯ ನಿರ್ವಾಹಕ ಅಭಿಯಂತರರು(ವಿ),ಉಪ-ವಿಭಾಗ ಕಾರಟಗಿ

1.ಶ್ರೀ ಜಗದೀಶ ಪ್ರಭಾರಿ ಹಿರಿಯ ಸಹಾಯಕ ಕಾರಟಗಿ ಉಪ-ವಿಭಾಗ ಕಾರಟಗಿ.
2.ಶ್ರೀಮತಿ ನೂರಪಾತಿಮಾ ಸಹಾಯಕ ಇಂಜಿನಿಯರ್(ತಾಂತ್ರಿಕ), ಉಪ-ವಿಭಾಗ ಕಾರಟಗಿ .
3.ಶ್ರೀ ದ್ರಾಕ್ಷಾಯಿಣಿ ಕಿರಿಯ ಇಂಜಿನಿಯರ್, ಶಾಖಾಧಿಕಾರಿಗಳು ಬೂದಗುಂಪ.
4. ಶ್ರೀ ಮಹಾಂತೇಶ, ಕಿರಿಯ ಇಂಜಿನಿಯರ್, ಶಾಖಾಧಿಕಾರಿಗಳು ಕಾರಟಗಿ.
5. ಶ್ರೀ ಪ್ರಸಾದ, ಕಿರಿಯ ಇಂಜಿನಿಯರ್, ಶಾಖಾಧಿಕಾರಿಗಳು ಶ್ರೀರಾಮನಗರ.
6. ಶ್ರೀಮತಿ ಪ್ರಭಾವತಿ ಮರಡಿ ಸಹಾಯಕಿ, ಉಪ-ವಿಭಾಗ ಕಾರಟಗಿ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ.

K.N.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ)
ಕಾರ್ಯ ಮತ್ತು ಪಾಲನೆ ಉಪ-ವಿಭಾಗ ಜೆಸ್ಕಾಂ
ಕಾರಟಗಿ